# ಲೇಸ್ ಲಾಸ್ಯ



ಹಿಂದೆ ಸೀರೆಯ ಅಂಚು, ರವಿಕೆಯ ತೋಳಿನ ಭಾಗ, ಕತ್ತಿನ ಭಾಗದ ವಿನ್ಯಾಸಕ್ಕೆ, ಪುಟ್ಟ ಮಕ್ಕಳು ಧರಿಸುವ ಫ್ರಾಕ್‌ಗಳಿಗೆ ಮಾತ್ರ ಲೇಸ್ ಅಳವಡಿಸಲಾಗುತ್ತಿತ್ತು. ಆದರೆ ಈಗ ಲೇಸ್ ಇಡೀ ಉಡುಪಾಗಿ ಪರಿವರ್ತನೆಗೊಂಡಿದೆ. ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

★ ಆಶಾ ಕುಲಕರ್ಣಿ

ಉಡುಪಿಗೆ ಲೇಸ್ ಹಾಕಿ ಹೊಲಿಯುವುದು ಹಳೆಯ ಫ್ಯಾಷನ್ ಆಗಿತ್ತು. ಇದೀಗ ಅದೇ ಫ್ಯಾಷನ್ ಮತ್ತೆ ಮರುಕಳಿಸಿದೆ. ಇಡೀ ಉಡುಪೇ ಲೇಸ್‌ನಿಂದ ಆವೃತ್ತವಾಗಿದೆ.

ಲೇಸ್ ಎಂಬ ಪಾರದರ್ಶಕವಾದ ಈ ತುಂಡು ಬಟ್ಟೆಯಲ್ಲಿ ಅದೆಂಥಾ ಸೌಂದರ್ಯ ಅಡಗಿದೆ. ಜೇಡರ ಬಲೆಯಂತೆ ಹೆಣೆದ ಈ ಬಟ್ಟೆ ಒಂದೊಮ್ಮೆ ಫ್ಯಾಷನ್ ಲೋಕದಲ್ಲಿ ರಾಣಿಯಂತೆ ಮೆರೆದಿತ್ತು. ಆದರೆ ಕೆಲಕಾಲ ನಮ್ಮಿಂದ ದೂರ ಸರಿದಿದ್ದ ಈ ಲೇಸ್ ಈಗ ಹೊಸ ಹೊಸ ವಿನ್ಯಾಸ ಪಡೆದು ಮತ್ತೆ ಫ್ಯಾಷನ್ ಲೋಕಕ್ಕೆ ಲಗ್ಗೆ ಇಟ್ಟಿದೆ. ಯುವತಿಯರನ್ನೂ ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುತ್ತಿರುವ ಈ ಲೇಸ್ ಉಡುಪು ಸೆಲೆಬ್ರಿಟಿಗಳು, ಮಾಡೆಲ್‌ಗಳಿಗೆ ಹಾಟ್ ಫೇವರೆಟ್ ಆಗಿದೆ.

ಹಿಂದೆ ಕಸೂತಿಯಲ್ಲಿ ಒಂದಾಗಿದ್ದ ಈ ಲೇಸ್ ತಯಾರಿಸುವ ಕಲೆ ಸುಮಾರು 15 ರಿಂದ 16ನೇ ಶತಮಾನದಿಂದಲೂ ಚಾಲ್ತಿಯಲ್ಲಿದೆ. ಆಗಿನ ಜನ ಬಂಗಾರದ ಎಳೆ, ಬೆಳ್ಳಿಯ ಎಳೆಗಳಿಂದ ಸುಂದರವಾಗಿ ಲೇಸ್‌ಗಳನ್ನು ತಯಾರಿಸುತ್ತಿದ್ದರು. ಅಮೆರಿಕ, ಇಟಲಿ, ರಷ್ಯಾ ಮುಂತಾದ ದೊಡ್ಡ ದೊಡ್ಡ ದೇಶಗಳಲ್ಲಿ ಅಧಿಕಾರಿಗಳು ಧರಿಸುವ ಕೋಟ್ ಮತ್ತು ಕ್ಯಾಪ್‌ಗಳ ಮೇಲೆ ಚಿನ್ನದ ಲೇಸ್‌ಗಳನ್ನು ಅಲಂಕಾರಕ್ಕೆ ಬಳಸುತ್ತಿದ್ದರು. ಅದು ಅವರ ಪ್ರತಿಷ್ಠೆಯ ಸಂಕೇತವೂ ಆಗಿತ್ತು. ಕಾಲ ಬದಲಾದಂತೆ ಹತ್ತಿಯ ದಾರದ ಎಳೆಗಳಿಂದ ಲೇಸ್‌ಗಳನ್ನು ತಯಾರಿಸುವ ಕಾರ್ಯ ಪ್ರಾರಂಭವಾಯಿತು.

60 ರಿಂದ 70 ರ ದಶಕದ ಮಹಿಳೆಯರು ಬರೀ ಕಪ್ಪು, ಬಿಳುಪು ದಾರದ ಎಳೆಗಳಿಂದ ಕ್ರೋಶಾ ಸೂಜಿಯ ಮೂಲಕ ಲೇಸ್‌ಗಳನ್ನು ತಯಾರಿಸಿ ತಮ್ಮ ಸೀರೆಯ ಅಂಚು, ರವಿಕೆಯ ತೋಳಿನ ಭಾಗ, ಕತ್ತಿನ ಭಾಗದ ವಿನ್ಯಾಸಕ್ಕೆ, ಪುಟ್ಟ ಮಕ್ಕಳು ಧರಿಸುವ ಫ್ರಾಕ್, ಲಂಗ ಮುಂತಾದವುಗಳಿಗೆ ಲೇಸ್ ಅಳವಡಿಸಿ ಅದರ ಅಂದವನ್ನು ಹೆಚ್ಚಿಸುತ್ತಿದ್ದರು. ಅಲ್ಲದೆ ಮನೆಯ ಅಲಂಕಾರಕ್ಕೂ ಲೇಸ್‌ಗಳನ್ನು ಬಳಸುತ್ತಿದ್ದರು. ನಂತರದ ದಿನಗಳಲ್ಲಿ ಉಡುಪುಗಳ ಕೆಳಭಾಗದ ಅಂದವನ್ನು ಹೆಚ್ಚಿಸಲು ಮಾತ್ರ ಉಪಯೋಗಿಸುತ್ತಿದ್ದ ಲೇಸ್ ಈಗ ಇಡೀ ಉಡುಪಾಗಿ ಪರಿವರ್ತನೆಗೊಂಡಿರುವುದು ಆಶ್ಚರ್ಯ.

ಒಂದು ಕಾಲದಲ್ಲಿ ಒಂದಿಷ್ಟು ಸಿಂಪಲ್ಲಾಗಿ ಮತ್ತು ಒಂದಿಷ್ಟು ಸ್ಟೈಲಿಷ್ ಆಗಿ ಕಾಣ ಬಯಸುತ್ತಿದ್ದ ಯುವತಿಯರು ನೆಟ್ ಕ್ಲಾತ್‌ಗಳನ್ನು ಬಳಸುತ್ತಿದ್ದರು. ನೆಟ್ ಬಟ್ಟೆಯ ಟಾಪ್ಸ್, ಸಲ್ವಾರ್, ಗಾಗ್ರಾ ಎಂದೆಲ್ಲಾ ಧರಿಸುತ್ತಿದ್ದ ಯುವತಿಯರು ಈಗ ನೆಟ್ ಉಡುಪುಗಳ ಬದಲಾಗಿ ಲೇಸ್ ಉಡುಪುಗಳಿಗೆ ಮೊರೆ ಹೋಗಿದ್ದಾರೆ. ಪುಟ್ಟ ಹುಡುಗಿಯರಿಂದ ಹಿಡಿದು ಎಲ್ಲಾ ವಯೋಮಾನದ ಮಹಿಳೆಯರು ಈ ಲೇಸ್ ಉಡುಪುಗಳನ್ನು ಇಷ್ಟಪಡುತ್ತಾರೆ. ಸೆಲೆಬ್ರಿಟಿಗಳು ಹಾಗೂ ಮಾಡೆಲ್‌ಗಳು ಏನೇ ಫ್ಯಾಷನ್ ಮಾಡಿದರೂ ಅದು ಒಂದು ಫ್ಯಾಷನ್ ಟ್ರೆಂಡ್ ಆಗುತ್ತದೆ. ಈ ಲೇಸ್ ವಿಷಯದಲ್ಲೂ ಆಗಿದ್ದು ಅದೇ.

ಫ್ಯಾಷನ್ ಲೋಕದಲ್ಲಿ ಕೆಂಪು ಮತ್ತು ಕಪ್ಪು ಬಣ್ಣದ ಉಡುಪುಗಳಿಗೆ ಎಲ್ಲಿಲ್ಲದ ಆದ್ಯತೆ. ಇವು ಸೆಲೆಬ್ರಿಟಿಗಳಿಗೆ ಒಂದು ಬೋಲ್ಡ್ ಮತ್ತು ಗ್ಲಾಮರಸ್ ಲುಕ್ ನೀಡುತ್ತವೆ. ಈ ಬಣ್ಣಗಳ ಲೇಸ್ ಉಡುಪು ತೊಟ್ಟರಂತೂ ಅವರ ಸೌಂದರ್ಯ ಇಮ್ಮಡಿಯಾಗುವುದರಲ್ಲಿ ಸಂದೇಹವೇ ಇಲ್ಲ. ಇದನ್ನೇ ಉಪಯೋಗಿಸಿಕೊಂಡ ಬಾಲಿವುಡ್ ಚಿತ್ರ ತಾರೆಯರು ತಾವು ಹೋಗುವ ಸಣ್ಣ ಪುಟ್ಟ ಸಮಾರಂಭಗಳಲ್ಲಿಯೂ ಕೂಡ ಕೆಂಪು ಮತ್ತು ಕಪ್ಪು ಬಣ್ಣದ ಲೇಸ್ ಉಡುಪುಗಳನ್ನೇ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ.

ಬಲೆ ಬಲೆಯಂತೆ ಹೆಣೆದಿರುವ ಈ ಲೇಸ್ ಬಟ್ಟೆ ನೋಡಲು ಒಮ್ಮೆ ಪಾರದರ್ಶಕದಂತೆ ಕಂಡರೂ ಏನೂ ಕಾಣುವುದಿಲ್ಲ ಇದೇ ಅದರ ಸ್ಪೆಷಾಲಿಟಿ. ಕಡು ಬಣ್ಣಗಳಾದ ಗುಲಾಬಿ, ಕೆಂಪು, ಹಸಿರು, ಹಳದಿ ಇಂಥ ಎದ್ದು ಕಾಣುವ ಬಣ್ಣಗಳ ಲೇಸ್ ಉಡುಪುಗಳು ಬೋಲ್ಡ್ ಲುಕ್ ನೀಡುವುದರ ಜೊತೆಗೆ ಗ್ಲಾಮರಸ್ ಆಗಿರುತ್ತವೆ. ಹಾಗೇ ಲೇಸ್‌ಗಳಿಂದ ಸಿಂಗಾರಗೊಂಡ ಗೌನ್‌ಗಳು, ಡಬಲ್ ಶೇಡ್‌ಗಳುಳ್ಳ ಲೇಸ್‌ಗಳು, ಮೆಟಾಲಿಕ್ ಲೇಸ್‌ಗಳು ಸುಂದರವಾಗಿ ಕಾಣುತ್ತವೆ.

### ಲೇಸ್ ಉಡುಪು; ಕೆಲವು ಟಿಪ್ಸ್

* ಲೇಸ್ ಬಟ್ಟೆ ತುಂಬಾ ಪಾರದರ್ಶಕವಾಗಿ ಇರುವುದರಿಂದ ಬಟ್ಟೆಗೆ ತಕ್ಕಂಥ ಲೈನಿಂಗ್ ಆಯ್ಕೆ ಮಾಡುವುದು ಮರೆಯದಿರಿ.
* ಲೇಸ್ ಬಟ್ಟೆಯನ್ನು ಮನೆಯಲ್ಲಿಯೇ ಒಗೆಯುವ ಹಾಗಿದ್ದರೆ ಅದನ್ನು ನಿಧಾನವಾಗಿ ಸೋಪ್ ನೀರಿನಲ್ಲಿ ಅದ್ದಿ ಕೈಯಿಂದ ಮಾತ್ರ ಉಜ್ಜಬೇಕು. ಬ್ರಷ್‌ನಿಂ ಉಜ್ಜಿದರೆ ಎಳೆ ಕಿತ್ತು ಬರುವ ಸಂಭವ ಜಾಸ್ತಿ.
* ಲೇಸ್ ಉಡುಪುಗಳನ್ನು ಆರಿಸುವಾಗ ಆದಷ್ಟು ಜಾಗ್ರತೆಯಾಗಿರಬೇಕು. ಕೆಲವೊಂದು ಲೇಸ್ ತ್ವಚೆಗೆ ಕಂಫರ್ಟ್ ಅಂದೆನಿಸುವುದಿಲ್ಲ. ಚುಚ್ಚಿದ ಅನುಭವ ನೀಡುತ್ತವೆ. ಹೀಗಾಗಿ ಮೆತ್ತನೆಯ ಲೇಸ್‌ಗಳ ಬಟ್ಟೆಗಳನ್ನೇ ಧರಿಸುವುದು ಸೂಕ್ತ.
* ಹವಾಮಾನಕ್ಕೆ ತಕ್ಕಂತೆ ಚಳಿಗಾಲದಲ್ಲಿ ದಪ್ಪನೆಯ ಲೇಸ್ ಬಟ್ಟೆ ಸೂಕ್ತ. ಇದು ದೇಹಕ್ಕೆ ಬೆಚ್ಚನೆಯ ಅನುಭವ ನೀಡುತ್ತದೆ. ಬೇಸಿಗೆಯಲ್ಲಿ ತೆಳುವಾದ, ಅದರಲ್ಲೂ ನೆಟ್ಟೆಡ್ ಲೇಸ್ ಉಡುಪು ಧರಿಸುವುದು ಸೂಕ್ತ. ಇದು ದೇಹವನ್ನು ತಂಪಾಗಿಡುತ್ತದೆ.
* ಲೇಸ್ ಉಡುಪುಗಳು ಹೆಚ್ಚು ಗ್ರಾಂಡ್ ಮತ್ತು ಎಲಿಗಂಟ್ ಲುಕ್ ನೀಡುವುದರಿಂದ ಇವುಗಳ ಉಡುಪುಗಳನ್ನು ಧರಿಸುವಾಗ ಹೆಚ್ಚು ಗ್ರಾಂಡಾಗಿರುವ ಆಕ್ಸೆಸರೀಸ್‌ಗಳು ಬೇಕಾಗುವುದಿಲ್ಲ. ಲೇಸ್ ಉಡುಪು ಜತೆಗೆ ಬೀಡ್ಸ್‌ಗಳ ಸರ, ಕಿವಿಯೋಲೆ ಧರಿಸುವುದು ಒಳ್ಳೆಯದು.